**ಸಾಕ್ಷಿಯನ್ನು ದಿನಾಂಕ 06.04.2021 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಟಿ ಪಿ ಡಿ ರವರಿಂದಃ**

1. ಘಟನೆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನನ್ನ ಅಣ್ಣನ ಹೆಸರು ಶ್ರೀ ಲೋಕೇಶ. ನಾನು ಹಸು ಮತ್ತು ಹಾಲು ವ್ಯಾಪಾರ ಮಾಡುತ್ತೇನೆ. ಹಸು ಮತ್ತು ಹಾಲು ವ್ಯಾಪಾರ ಮಾಡುವ ಬಗ್ಗೆ ದಾಖಲೆ ಇದೆ, ಹಾಜರು ಮಾಡಲು ತೊಂದರೆ ಇಲ್ಲ. ನಾನು 5 ಹಸುಗಳನ್ನು ಸಾಕಿದ್ದೇನೆ ಮತ್ತು ಹಾಲನ್ನು ಒಂಟಿಕೊಪ್ಪಲು ಡೈರಿಗೆ ಹಾಕುತ್ತೇನೆ. ನಾನು ಈಗ ಹಸುಗಳನ್ನು ಹೆಬ್ಬಾಳದಲ್ಲಿ ಕಟ್ಟಿದ್ದೇನೆ. ಡೈರಿಗೆ ನಾನು ಹಾಲನ್ನು ನನ್ನ ಹೆಸರಿನಲ್ಲಿ ಹಾಕುತ್ತೇನೆ. ನಾನು ಪ್ರತಿನಿತ್ಯ ಹಸುಗಳನ್ನು 6 ನೇ ಮುಖ್ಯರಸ್ತೆ ಗಲ್ಲಿಯಲ್ಲಿ ಮೆಯಿಸುವ ಸಲುವಾಗಿ ಬಿಡುತ್ತೇನೆ. ಸದರಿ ರಸ್ತೆಯಲ್ಲಿ ಮೆಯಿಸಲು ಜಾಗ ಇಲ್ಲ ಎಂದರೆ ಸರಿಯಲ್ಲ. ಮ.12.00 ರ ವೇಳೆಗೆ ಮೆಯಿಸಲು ಬಿಟ್ಟ ಹಸುಗಳನ್ನು ಕರೆದುಕೊಂಡು ಬರುತ್ತೇನೆ. ಆ ನಂತರ ಮತ್ತೆ ಹಸುಗಳನ್ನು ಮೆಯಿಸುವ ಸಲುವಾಗಿ ಬಿಡುವುದಿಲ್ಲ.

2. ನನ್ನ ಮನೆಯಿಂದ 6 ನೇ ಮುಖ್ಯ ರಸ್ತೆಗೆ ಸುಮಾರು 1 ವರೆ ಕಿಮೀ ದೂರ ಇದೆ. ನನ್ನ ಮನೆ ಮತ್ತು 6 ನೇ ಮುಖ್ಯ ರಸ್ತೆ ನಡುವೆ ಮೆಯಿಸುವ ಸಲುವಾಗಿ ಸಾಕಷ್ಟು ಜಾಗ ಇದೆ ಎಂದರೆ ಸರಿ. ನನ್ನ ಮನೆ ವಿವಿ ಮೊಹಲ್ಲಾ 13 ನೇ ಕ್ರಾಸ್ ನಲ್ಲಿ ಇದೆ. ಮಾತೃಮಂಡಲಿ ಸರ್ಕಲ್ ಎದುರುಗಡೆ ದೇವಸ್ಥಾನ ಇದೆ ಎಂದರೆ ಸರಿ. ದೇವಸ್ಥಾನದ ಪಕ್ಕ ಏಕಮುಖ ವಾಹನ ಸಂಚಾರ ಇದೆ ಎಂದರೆ ಸರಿಯಲ್ಲ. ನಾನು ಹಸುಗಳನ್ನು 6 ನೇ ಮುಖ್ಯ ರಸ್ತೆಯಿಂದ ಟೆಂಪಲ್ ರಸ್ತೆಯ ಮೂಲಕ ರಾಯಲ್ ವರ್ಲ್ಡ್ ರಸ್ತೆಯ ಕಡೆ ಬರುತ್ತಿದ್ದೆ. ನಾನು ಹಸುಗಳನ್ನು 6 ನೇ ಮುಖ್ಯರಸ್ತೆಯ ಗಲ್ಲಿಗೆ ಮೆಯಿಸುವ ಸಲುವಾಗಿ ಬಿಟ್ಟಿದ್ದನ್ನು ಬೇರೆ ವ್ಯಕ್ತಿಗಳು ನೋಡಿದ ಬಗ್ಗೆ ಗೊತ್ತಿಲ್ಲ. ಅಂಚೆ ಕಚೇರಿ, ಟೆಂಪಲ್ ರಸ್ತೆಯ ಪಕ್ಕದ ರಸ್ತೆಯ ಮೂಲೆಯಲ್ಲಿ ಇದೆ ಎಂದರೆ ಸರಿ. ಪ್ರತಿನಿತ್ಯ ಬೆ.10.25 ರ ವೇಳೆಗೆ ಹಸುಗಳನ್ನು ನೋಡಿಕೊಂಡು ಬರುವ ಸಲುವಾಗಿ ಹೋಗುತ್ತಿದ್ದೆ. ಅಂಚೆ ಕಚೇರಿಗೆ ಹೊಂದಿಕೊಂಡ ಮುಖ್ಯ ರಸ್ತೆಯಲ್ಲಿ ಸಾಕಷ್ಟು ವಾಹನ ಮತ್ತು ಜನ ಸಂಚಾರ ಇರುತ್ತದೆ ಎಂದರೆ ಸರಿ. ಅಂದು ಮುಖ್ಯ ರಸ್ತೆಯಿಂದ ಅಂಚೆ ಕಚೇರಿ ಕಡೆಗೆ ಬರುವಾಗ ಮಧ್ಯದಲ್ಲಿ ನನಗೆ ಯಾರು ಸಿಕ್ಕಿಲ್ಲ.

3. ಆರೋಪಿಗಳು ಕಳೆದ 7-8 ವರ್ಷಗಳಿಂದ ಪರಿಚಯ ಇದ್ದಾರೆ. ಕಾರಣ, ಟೀ ಅಂಗಡಿಯಲ್ಲಿ ಟೀ ಕುಡಿಯುತ್ತಿದ್ದರು. ನಾನು ಕೆಲಮೊಮ್ಮೆ ಟೀ ಅಂಗಡಿಗೆ ಹೋಗುತ್ತಿದ್ದೆ. ನಾನು ಆರೋಪಿಗಳ ಜೊತೆ ಮೊದಲಿನಿಂದ ಮಾತಾಡಿಲ್ಲ. ನಾನು ಮತ್ತು ಆರೋಪಿಗಳು ಬೇರೆ ಬೇರೆ ಏರಿಯಾದಲ್ಲಿ ಇದ್ದೇವೆ ಎಂದರೆ ಸರಿ. ಆರೋಪಿಗಳು ಅಂಚೆ ಕಚೇರಿ ಕಾಪೌಂಡ ಪಕ್ಕ ಇದ್ದರು. ರಾಯಲ್ ವರ್ಲ್ಡ್ ಪಕ್ಕ ಚಿಕ್ಕ ರಸ್ತೆ ಇದೆ ಎಂದರೆ ಸರಿ. ನಾನು ನೋಡಿದಾಗ ಸ್ಯಾಂಟ್ರೋ ಕಾರಿನ ಮುಖ ಹೈವೆ ಇಟಿಂಗ್ ಹೋಟೆಲ್ ಕಡೆಗೆ ಇತ್ತು ಮತ್ತು ಕಾರು ರಸ್ತೆಯ ಬಲ ಬಾಗದಲ್ಲಿ ಇತ್ತು. ಕಾರು ಇದ್ದ ಸ್ಥಳದಿಂದ ರಾಯಲ್ ವರ್ಲ್ಡ್ ಗೆ 20-25 ಅಡಿ ಅಂತರ ಇತ್ತು ಎಂದರೆ ಸರಿ. ರಾಯಲ್ ವರ್ಲ್ಡ್ ನಿಂದ ವ್ಯಕ್ತಿ ಬಿದ್ದಿದ್ದ ಸ್ಥಳಕ್ಕೆ 200-250 ಅಡಿ ಅಂತರ ಇತ್ತು. ವ್ಯಕ್ತಿ ಬಿದ್ದಿದ್ದ ಸ್ಥಳಕ್ಕೆ 3 ರಸ್ತೆಗಳು ಸೇರುತ್ತದೆ ಎಂದರೆ ಸರಿ.

4. ಕಾರು ಇದ್ದ ಸ್ಥಳದಿಂದ ವ್ಯಕ್ತಿ ಬಿದ್ದಿದ್ದ ಸ್ಥಳಕ್ಕೆ ಸೈಕಲ್ ನಲ್ಲಿ 5 ನಿಮಿಷ ಅವಧಿಯಲ್ಲಿ ಹೋಗಬಹುದು ಎಂದರೆ ಸರಿ. ಅಂದು ನಾನು ಸೈಕಲ್ ನ್ನು ತಳ್ಳಿಕೊಂಡು ಹೋಗುತ್ತಿದ್ದೆ. ನಾನು ಸೈಕಲ್ ನ್ನು ತಳ್ಳಿಕೊಂಡು ಹೋಗುತ್ತಿದ್ದ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಸದರಿ ವೇಳೆ ಸದರಿ ರಸ್ತೆಯಲ್ಲಿ ವಾಹನಗಳ ಓಡಾಟ ಇತ್ತು ಎಂದರೆ ಸರಿಯಲ್ಲ. ಹೈವೆ ಇಟಿಂಗ್ ಹೋಟೆಲ್ ಪಕ್ಕ ಬೇರೆ ಹೋಟೆಲ್ ಗಳು ಇದೆ ಎಂದರೆ ಸರಿಯಲ್ಲ. ರಾಯಲ್ ವರ್ಲ್ಡ್ ಮುಂದೆ ಸಾಕಷ್ಟು ವಾಹನಗಳು ಇರುತ್ತದೆ ಎಂದರೆ ಸರಿಯಲ್ಲ. ರಾಯಲ್ ವರ್ಲ್ಡ್ ನ್ನು ಬೆಳಿಗ್ಗೆ 10.30 ರಿಂದ 11.00 ರ ನಂತರ ತೆಗೆಯುತ್ತಾರೆ. ಸದರಿ ಮುಖ್ಯ ರಸ್ತೆಯಲ್ಲಿ ಸಾಕಷ್ಟು ವಾಹನ ಮತ್ತು ಜನ ಸಂಚಾರ ಇತ್ತು ಎಂದರೆ ಸರಿಯಲ್ಲ. ಆರೋಪಿಗಳಿಂದ ನನಗೆ ಬೆದರಿಕೆ ಇರಲಿಲ್ಲ.

5. ಕಾರು ಇದ್ದ ಸ್ಥಳದಿಂದ ಹೈವೆ ಇಟಿಂಗ್ ಹೋಟೆಲ್ ಗೆ 5-6 ನಿಮಿಷ ಅವಧಿಯಲ್ಲಿ ಕ್ರಮಿಸಹುದು ಎಂದರೆ ಸರಿ. 3 ರಸ್ತೆಗಳು ಸೇರುವ ಸ್ಥಳದಿಂದ 100 ಅಡಿ ಕೆಳಗೆ ನಾನು ಇದ್ದೆ. ನನ್ನ ಪಕ್ಕದಲ್ಲಿ ಹಾದು ಹೋಗಿದ್ದ ಕಾರಿನ ಬಗ್ಗೆ ನನಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ನಾನು ಕಾರನ್ನು ನೋಡಿದ ಸಮಯದಿಂದ ನನ್ನನ್ನು ದಾಟಿಹೋದ ಸವಯಕ್ಕೆ 5-6 ನಿಮಿಷ ಆಗಿತ್ತು. ಸ್ಕೂಟರ್ ಹಿಂದೆ ಬೇರೆ ವಾಹನಗಳು ಇರಲಿಲ್ಲ. ವ್ಯಕ್ತಿ ಬಿದ್ದ ನಂತರ ಬೇರೆ ವಾಹನಗಳು ಬಂದಿಲ್ಲ. ನನ್ನ ಮುಂದೆ ಬೇರೆ ವಾಹನಗಳು ಇರಲಿಲ್ಲ. ನಾನು ಇದ್ದ ಸ್ಥಳದಿಂದ ಘಟನೆ ನಡೆದ ಸ್ಥಳಕ್ಕೆ 40 ಅಡಿ ಅಂತರ ಇತ್ತು. ವ್ಯಕ್ತಿ ಬಿದ್ದ ನಂತರವೂ ಸಹ ನಾನು ಸೈಕಲ್ ಸಮೇತ ಸ್ಥಳದಲ್ಲಿ ಇದ್ದೆ. ಸ್ಯಾಂಟ್ರೋ ಕಾರ ಚಾಲಕ ಬ್ರೆಕ್ ನ್ನು ಹಾಕಿಲ್ಲ. ಕಾರಿನ ಬಲಬಾಗದಿಂದ ಸ್ಕೂಟರ್ ಗೆ ಗುದ್ದಿದೆ. ಸ್ಕೂಟರ್ ನನಗೆ ಬಲಬಾಗದಲ್ಲಿ ಬಿದ್ದಿತ್ತು. ಸ್ಯಾಂಟ್ರೋ ಕಾರು ಸ್ಕೂಟರ್ ಗೆ ಡಿಕ್ಕಿ ಪಡಿಸಿದೆ.

6. ರಸ್ತೆ ಸುಮಾರು 10 ಅಡಿ ಅಗಲ ಇದೆ. ಸ್ಕೂಟರ್ ಫುಟಪಾತ್ ದಿಂದ 2-3 ಅಡಿ ದೂರ ಇತ್ತು. ರಸ್ತೆಯ ಮಧ್ಯ ಬಿಳಿ ಪಟ್ಟಿ ಇರಲಿಲ್ಲ. ನಾನು ನೋಡಿದಾಗ ಸುಮಾರು 5 ಜನ ಇದ್ದರು. ಬಿದ್ದ ವ್ಯಕ್ತಿ ನನಗೆ ಪರಿಚಯ ಇರಲಿಲ್ಲ. ಸ್ಕೂಟರ್ ಸವಾರ ಹೆಲ್ಮೆಟ್ ನ್ನು ಹಾಕಿದ್ದರು. ನಾನು ನೋಡಿದಾಗ ವ್ಯಕ್ತಿ ಬಿದ್ದಿದ್ದ ಸ್ಥಳದಿಂದ 10 ಅಡಿ ಅಂತರದ ಒಳಗೆ ಹೆಲ್ಮೆಟ್ ಬಿದ್ದಿತ್ತು. ಕಾರು ಸ್ಕೂಟರ್ ಗೆ ಡಿಕ್ಕಿ ಪಡಿಸಿದ ನಂತರ ನಾನು ವ್ಯಕ್ತಿ ಬಿದ್ದಿದ್ದ ಸ್ಥಳಕ್ಕೆ ಹೋಗಿಲ್ಲ. ಅಪಘಾತ ನಂತರ ಬೇರೆ ಸಾರ್ವಜನಿಕರು ಸ್ಥಳಕ್ಕೆ ಬಂದಿಲ್ಲ.ಅಪಘಾತ ನಂತರ 3-4 ನಿಮಿಷಗಳ ತನಕ ನಾನು ಸ್ಥಳದಲ್ಲಿ ಇದ್ದೆ. ಕಾರು ನನಗೆ ಬಲಬಾಗದಲ್ಲಿ ನಿಂತಿತ್ತು. ಕಾರು ನಿಂತಿದ್ದ ಕಾರಣ ವಾಹನ ಸಂಚಾರಕ್ಕೆ ತಡೆಯಾಗುತ್ತಿತ್ತು ಎಂದರೆ ಸರಿಯಲ್ಲ. ಘಟನೆ ಸುಮಾರು 3 ನಿಮಿಷ ಅವಧಿಯ ತನಕ ಆಗಿದೆ. ಹಲ್ಲೆ ಮಾಡಿದ ವ್ಯಕ್ತಿಗಳು ಹೊಟರು ಹೋದ ನಂತರ ನಾನು ಏಟು ಬಿದ್ದದ್ದ ವ್ಯಕ್ತಿಯ ಬಳಿ ಹೋಗಿ ನೋಡಿದ್ದೇನೆ ಅದೆ ವೇಳೆ ಬೇರೆ 2-3 ವ್ಯಕ್ತಿಗಳು ಸ್ಥಳಕ್ಕೆ ಬಂದಿದ್ದರು. ಘಟನೆ ವೇಳೆ ಬೇರೆ ಸಾರ್ವಜನಿಕರು ಇರಲಿಲ್ಲ. ಸದರಿ ವ್ಯಕ್ತಿಗೆ ತಲೆಗೆ ಮತ್ತು ಕೈಗೆ ಮಚ್ಚಿನ ಏಟುಗಳು ಆಗಿತ್ತು. ಅಪಘಾತ ನಂತರ ಸದರಿ ವ್ಯಕ್ತಿ ಕೂಗಿಕೊಂಡಿಲ್ಲ.

7. ಸದರಿ ವ್ಯಕ್ತಿ ಮೋರಿಯ ಒಳಗೆ ಬಿದ್ದಿದ್ದರು. ಪೋಲಿಸರು ಮಚ್ಚನ್ನು ನನಗೆ ತೋರಿಸಿಲ್ಲ. ದಿನಾಂಕ 25.12.2016 ರಂದು ನಾನು ಪೊ.ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿದ್ದೇನೆ. ಮೋರಿಯಲ್ಲಿ ಮಚ್ಚು

ಬಿದ್ದಿತ್ತು. ಪೋಲಿಸರು ನನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ. ಅಂದು 5 ಜನ ವ್ಯಕ್ತಿಗಳು ಟ್ರಾಕ್ ಪ್ಯಾಂಟು ಮತ್ತು ಟೀ ಶರ್ಟ್ ನ್ನು ಹಾಕಿದ್ದರು. ಹಲ್ಲೆ ಮಾಡುವಾಗ ಬಿದ್ದ ವ್ಯಕ್ತಿ ಕೈಗಳನ್ನು ಅಲ್ಲಾಡಿಸುತ್ತಿದ್ದರು. ಮಚ್ಚಿನಿಂದ ಹಲ್ಲೆ ಮಾಡಿದ ಬಗ್ಗೆ ನೋಡಿದ್ದೇನೆ ಆದರೆ ಮಚ್ಚಿನ ಹಿಂಬಾಗದಿಂದ ಅಥವಾ ಮಚ್ಚಿನ ಬಾಯಿಯಿಂದ ಹಲ್ಲೆ ಮಾಡಿದ್ದಾರೆ ಎಂದು ನೋಡಿಲ್ಲ. 5 ಜನ ವ್ಯಕ್ತಿಗಳು ಹಲ್ಲೆ ಮಾಡುವಾಗ ನನ್ನನ್ನು ನೋಡಿಲ್ಲ. ಹಲ್ಲೆಗೆ ಒಳಗಾದ ವ್ಯಕ್ತಿಯನ್ನು ವ್ಯಾನಿಗೆ ಹಾಕುವಾಗ ಉಸಿರಾಡುತ್ತಿದ್ದರು. ಹಲ್ಲೆ ಮಾಡಿದ ವ್ಯಕ್ತಿಗಳ ಬಗ್ಗೆ ನಾನು ವ್ಯಾನಿನ ವ್ಯಕ್ತಿಗೆ ಮತ್ತು ಯಾರಿಗೂ ಹೇಳಿಲ್ಲ. ಚಿಕ್ಕಪ್ಪ ಎಂದು ಕೂಗಿಕೊಂಡ ವ್ಯಕ್ತಿಯ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅಪೋಲೊ ಆಸ್ಪತ್ರೆಗೆ ಹೋಗಿಲ್ಲ.

8. ಪೋಲಿಸರು ನನ್ನ ಮನೆಯ ಬಳಿ ಬಂದು ನನ್ನನ್ನು ಕರೆದಿಲ್ಲ. ನಾನು ಪೊ.ಠಾಣೆಗೆ ಹೋದಾಗ 5 ಜನ ವ್ಯಕ್ತಿಗಳು ಠಾಣೆಯಲ್ಲಿ ಇದ್ದರು. ಘಟನೆ ಬಗ್ಗೆ ಹೇಳಿಕೆ ಕೊಡಲು ನಾನು ಸ್ವತಃ ಪೊ.ಠಾಣೆಗೆ ಹೋಗಿದ್ದೆ ದೂರು ಕೊಡಲು ಹೋಗಿರಲಿಲ್ಲ ಮತ್ತು ದೂರು ಕೊಟ್ಟ ಬಗ್ಗೆ ಗೊತ್ತಿರಲಿಲ್ಲ. ನಾನು ಪೋಲಿಸರ ಸಮಕ್ಷಮ ನೀಡಿದ ಹೇಳಿಕೆಯಂತೆ ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ. 5 ಜನ ಹಲ್ಲೆ ಮಾಡಿದ ವ್ಯಕ್ತಿಗಳ ಮೈಗೆ ರಕ್ತದ ಕಲೆ ಆಗಿದ್ದ ಬಗ್ಗೆ ನಾನು ನೋಡಿಲ್ಲ. ಚಿಕ್ಕಪ್ಪ ಎಂದು ಕೂಗಿಕೊಂಡ ಬಂದಿದ್ದ ವ್ಯಕ್ತಿಗೆ ಅಪಘಾತ ಬಗ್ಗೆ ನಾನು ತಿಳಿಸಿಲ್ಲ. ವ್ಯಕ್ತಿ ಬಿದ್ದಿದ್ದ ಸ್ಥಳಕ್ಕೆ ಅಕ್ಕಪಕ್ಕದಲ್ಲಿ ಮನೆಗಳು ಇದೆ ಎಂದರೆ ಸರಿ. ಆರೋಪಿಗಳು ಮಾಡಿದ ಘಟನೆ ಕಾಲದಲ್ಲಿ ನಾನು ಕೂಗಿಕೊಂಡಿಲ್ಲ. ನಾನು ಹೇಳಿದಂತೆ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ಘಟನೆ ಬಗ್ಗೆ ನಾನು ನನ್ನ ಸ್ನೇಹಿತರಿಗೆ ಮತ್ತು ಯಾರಿಗೂ ತಿಳಿಸಿಲ್ಲ.

**ಪಾಟೀ ಸವಾಲುಃ 8, 10, 11, 12 ನೇ ಆರೋಪಿತಗಳ ವಕೀಲರು ಈ ಮೇಲಿನಂತೆ ಪಾಟಿಸವಾಲನ್ನು ಅಳವಡಿಸಿಕೊಂಡಿದ್ದಾರೆ.**

**ಮರುವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ .,**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧಿಶರು ,**
**ಮೈಸೂರು.**